Railway Line from Chitaldrug to Rayadurg.

Q.—470. **Sri Mulka GOVINDA REDDY** (Chitaldrug).—

Will the Government be pleased to state:—

(*a*) whether the Government of Mysore or the Central Government under the advice of the Mysore Government had conducted any survey for laying the Railway line from Chitaldrug to Rayadurg;

(*b*) what is the estimate and what are the villages the proposed railway line would pass through;

(*c*) wh ther the Mysore Government have prevailed upon the Government of India to take up the Railway line at least under the Second Five-Year Plan?

A.—**Sri Kadidal MANJAPPA** (Minister for Revenue and Public Works) —

(*a*) No.

(*b*) Does not arise in view of reply to (*a*).

(*c*) The line is included in the recommendations made.

Questions requiring answers.

*ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ಇನ್ನು ಈ ಸಭೆ ಎರಡು ದಿವಸಗಳು ಮಾತ್ರ ನಡೆಯುತ್ತದೆ. ಆದರೆ ಮಾನ್ಯ ಸದಸ್ಯರು ಕಳುಹಿಸಿದ್ದಂಥ ಅನೇಕ ಪ್ರಶ್ನೆಗಳಿಗಿನ್ನೂ ಉತ್ತರ ಬಂದಿಲ್ಲ. ಅವುಗಳಿಗೆ ಉತ್ತರ ಬರುವುದಿಲ್ಲವೇನೋ ಎನ್ನುವ ಅನುಮಾನ ಬಂದಿರುತ್ತದೆ. ಅವುಗಳನ್ನು ಚರ್ಚೆಗೆ ತೆಗೆದುಕೊಳ್ಳಲು ಅವಕಾಶ ಬರಮಾಡಬೇಕೆಂದು ಕೋರುತ್ತೇನೆ. ಆದುದರಿಂದ ಆ ಎಲ್ಲ ಪ್ರಶ್ನೆಗಳಿಗೂ ಇಲ್ಲಿ ಚರ್ಚೆ ನಡೆಸಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:—ಒಂದೊಂದು ದಿವಸಕ್ಕೆ ಎಷ್ಟೆಷ್ಟು ಪ್ರಶ್ನೆಗಳನ್ನು ತೆಗೆದುಕೊಳ್ಳಬೇಕೋ ಅಷ್ಟನ್ನು ಕ್ಲುಪ್ತ ಮಾಡಲಾಗಿದೆ. ಅದರಂತೆ ಈಗ ಅವುಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಗುತ್ತಿಡೆ.

Sri M. PALANIAPPAN (Ulsoor).—Is there any limit to the number of questions set down for a day?

Mr. SPEAKER.—We have fixed the number at 30 for a day.

Sri M. PALANIAPPAN.—What would become of other questions?

Mr. SPEAKER.—We have printed tham in the order in which replies are received, but we do not know what to do with the other questions. I will see about it.

Security measures for the Session.

*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊನ್ನಗರ).—ಸ್ವಾಮಿ ಈಗ ನಡೆಯುತ್ತಿರುವ ಈ ವಿಧಾನ ಸಭೆಯ ಅಧಿವೇಶನದ ಬಗ್ಗೆ ಸೆಕ್ಯೂರಿಟಿ ಮೆಜರ್ಸಿಗಾಗಿ ಮತ್ತು ಬಂದೋಬಸ್ತಿಗಾಗಿ ಸರ್ಕಾರದವರು ಪೋಲೀಸ್ ಬಂದೋಬಸ್ತನ್ನು ಹಾಕಿದ್ದಾರೆ. ಆದರೆ ನಾವು ಪೋಲೀಸಿನವರ ಮಟ್ಟದಲ್ಲಿ ವರ್ತಿಸುವುದಕ್ಕಾಗುವುದಿಲ್ಲ. ಹಾಗೆ ವರ್ತಿಸಿದರೆ ನಮಗೆ ಅದೊಂದು ಅಪಮಾನವಾದಂತೆ ಆಗುತ್ತದೆ. ಆದರೆ ಈಗ ಈ ಪೋಲೀಸಿನವರನ್ನು ಇಲ್ಲಿ ಪಾಸ್‌ಗಳನ್ನು ಕೊಡತಕ್ಕ ನಂದರ್ಭಕ್ಕಾಗಿ ಹಾಕಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಜನರ ನೂಕು ನುಗ್ಗಲು ಅಪ್ಪು ಇಲ್ಲದಿದ್ದಾಗ್ಗೂ ಜನರನ್ನು ಒಳಗಡೆಗೆ ಬಿಡದಂತೆ ಅವರನ್ನು ಈ ಯಃಕಶ್ಚಿತ್ ಪೋಲೀಸಿನವರು ತಡೆಗಟ್ಟುತ್ತಿದ್ದುದನ್ನು ನಾನೇ ಸ್ವತಃ ನೋಡಿರುತ್ತೇನೆ. ನಾನು ಈ ವಿಷಯ ಇಬ್ಬರನ್ನು ನನ್ನ ಜೊತೆಯಲ್ಲಿ ಕರೆದುಕೊಂಡು ಬಂದಿದ್ದೆನು. ಒಬ್ಬರಿಗೆ ಮಾತ್ರ ಪಾಸಿತ್ತು. ಅಷ್ಟಕ್ಕೇ ಒಬ್ಬ ಪೋಲೀಸ್ ಸಬ್‌ಇನ್‌ಸ್ಪೆಕ್ಟರೂ ಮತ್ತು ಇಬ್ಬರು ಕಾನ್‌ಸ್ಟೇಬಲ್‌ಗಳೂ 'ಹಾಗೆ ಪಾಸಿಲ್ಲದವರನ್ನು ಒಳಕ್ಕೆ ಬಿಡಲಾಗುವುದಿಲ್ಲ; ತಾವು ಬೇಕಾಗಿದ್ದರೆ ಅವರಿಗೆ ಪಾಸ್ ತೆಗೆದುಕೊಂಡು ಬಂದರೆ ಒಳಗೆ ಕಳುಹಿಸಬಹುದು' ಎಂದು ಹೇಳಿದರು. ಇದು ಜನರಿಗೆ ಪೂರಾ ಅಗೌರವ. ಒಂದು ವೇಳೆ ಈ ಸಭೆಗಲ್ಲದೆ ಅಠಾರಾ ಕಛೇರಿ ಕೆಲಸಕ್ಕಾಗಿಯೇ ಬರತಕ್ಕಂಥ ಜನರು ಎಷ್ಟೋ ಇರುತ್ತಾರೆ. ಅಂಥವರನ್ನೆಲ್ಲಾ ಇವರು ನಿಮಗೆ ಪಾಸ್ ಇಲ್ಲ ಎಂದು ಅವರನ್ನು ಓಡಿಸೇಬಿಡುತ್ತಾರೆ. ಆದಕಾರಣ ತಾವು ಈ ಪೋಲೀಸಿನವರನ್ನು ಇಲ್ಲಿಂದ ತೆಗೆದುಹಾಕಿ ಜನರನ್ನು ಗುರ್ತಿಸಲು ಬೇರೆ ಯಾರನ್ನಾದರೂ ನೇಮಿಸುವುದು ಒಳ್ಳೆಯದೆಂದು ಸೂಚಿಸುತ್ತೇನೆ.

ಅಧ್ಯಕ್ಷರು.—ಎಲ್ಲ ವಿಚಾರಗಳೂ ತಮಗೇ ಗೊತ್ತಿದೆ. ಇಂಥ ವ್ಯವಸ್ಥೆಯನ್ನು ಮಾಡಬೇಕಾದ ಅವಶ್ಯಕತೆಯೇನೋ ಇರಲಿಲ್ಲ. ನಾವೆಲ್ಲರೂ ಇದಕ್ಕಾಗಿ ಬಹಳ ವಿಷಾದಪಡಬೇಕಾಗಿದೆ. ತಾವು ಈ ಬಗ್ಗೆ ಸಹಕರಿಸಿ ನಡೆಯಬೇಕು. ಪಾಸ್ ಇಲ್ಲದವರನ್ನು ಅಸೆಂಬ್ಲಿಯ ಪ್ರೈವೇಟ್ ಗ್ಯಾಲರಿಗೆ ಬಿಡಲೇಕೂಡದೆಂದು ನಾವು ಅವರಿಗೆ ತಿಳಿವಳಿಗೆ ಕೊಟ್ಟಿರುವಾಗ ಪಾಸ್ ಇಲ್ಲದಂಥವರನ್ನು ಒಳಗೆ ಬಿಡಿ ಎಂದು ಹೇಳಿದರೆ ನಿಜವಾಗಿಯೂ ಅವರಿಗೆ ಬಹಳ ತೊಂದರೆ ಇದೆ. ಅದನ್ನು ತಾವು ಅರಿತುಕೊಂಡು ನಾಳೆ ನಾಳಿದ್ದು ಸಹಕರಿಸಿ ನಡೆಯಬೇಕೆಂದು ಕೇಳಿಕೊಳ್ಳುತ್ತೇನೆ. ಅಠಾರಕಛೇರಿಗೆ ಬರತಕ್ಕವರಿಗೇನೂ ತೊಂದರೆಯಿಲ್ಲ.

ಶ್ರೀ ಎಸ್. ಗೋಪಾಲಗೌಡ.—ನಮ್ಮ ಜವಾಬ್ದಾರಿಯನ್ನು ನಾವು ಅರಿತಿದ್ದೇವೆ. ನಮ್ಮ ಗೌರವಕ್ಕೆ ತಕ್ಕ ಹಾಗೆ ನಾವು ವರ್ತಿಸಿಯೇ ವರ್ತಿಸುತ್ತೇವೆ. ಆದರೆ ನಮ್ಮಲ್ಲಿ ಪಾಸುಗಳಿದ್ದುವು, ಒಬ್ಬರಿಗೆ ಮಾತ್ರ ಇರಲಿಲ್ಲ.

ಅಧ್ಯಕ್ಷರು.—ತಾವು ಮೊದಲೇ ಹೇಳಿದ್ದೀರಿ. ಆದರೆ ಪಾಸ್ ಇಲ್ಲದವರನ್ನು ಒಳಗೆ ಬಿಡಬಾರದೆಂದು ಅವರಿಗೆ ತಿಳಿಸಿರುವಾಗ ಅವರು ಹೇಗೆ ಬಿಡುತ್ತಾರೆ? ಅದಕ್ಕಾಗಿ ತಾವು ಸಹಕರಿಸಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—'ಯಃಕಶ್ಚಿತ್' ಪೋಲೀಸರು ಎಂದು ಹೇಳಿದರೂ ಮಾನ್ಯ